# ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಬಾದಾಮಿ.

ಕ್ರಸಂ:ಅ4:2165:ನವಚೇತನ-ಖಾಪ್ರಾಶಾ-ಪ್ರಮಾ:ಮಂಜೂರಿ-2008-09: ದಿನಾಂಕ:-08-07-2008.

## -:ಜ್ಞಾಪನಾ ಪತ್ರ:-

**ವಿಷಯ**:-ನವಚೇತನ ಎಜ್ಯುಕೇಶನ್ ಸೊಸೈಟಿ, (ರಿ) ಬೊಳಚಗುಡ್ಡ, ತಾ:ಬಾದಾಮಿ ಸಂಸ್ಥೆಯ ಅಡಿಯಲ್ಲಿರುವ ನವಚೇತನ ಖಾಸಗಿ ಹಿರಿಯ ಪ್ರಾಥಮಿಕ ಶಾಲೆಗೆ ಸನ್ 1992-1993 ರಿಂದ ಪ್ರಥಮ ಮಾನ್ಯತೆ ನೀಡುವ ಕುರಿತು

**ಉಲ್ಲೇಖ**:-1)ಚೇರಮನ್ನರು, ನವಚೇತನ ಎಜ್ಯುಕೇಶನ್ ಸೊಸೈಟಿ (ರಿ) ಬೊಳಚಗುಡ್ಡ, ತಾ:ಬಾದಾಮಿ ಇವರ ಪ್ರಸ್ತಾವನೆ ದಿನಾಂಕ.07-07-2008

2)ಸುಬಂಧಿಸಿದ ಸಹಾಯಕ ಶಿಕ್ಷಣಾಧಿಕಾರಿಗಳು, ಬೊಳಚಗುಡ್ಡ ಇವರು ಶಾಲೆಯನ್ನು ತಪಾಸಣೆಗೊಳಿಸಿದ ದಿನಾಂಕ.04-07-2008.

3)ಸರಕಾರಿ ಆದೇಶ ಸಂಖ್ಯೆ ಇಡಿ:207:ಪಿಜಿಸಿ:92 ದಿನಾಂಕ.27-06-1992.

**ಪೀಠಿಕೆ**:-

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖ 01ರನ್ವಯ ನವಚೇತನ ಎಜ್ಯುಕೇಶನ್ ಸೊಸೈಟಿ, (ರಿ) ಬೊಳಚಗುಡ್ಡ, ತಾ:ಬಾದಾಮಿ ಇದರ ಅಡಿಯಲ್ಲಿ ಬೊಳಚಗುಡ್ಡದಲ್ಲಿ ನಡೆಯುತ್ತಿರುವ ನವಚೇತನ ಖಾಸಗಿ ಹಿರಿಯ ಪ್ರಾಥಮಿಕ (ಶಾಶ್ವತ ಅನುದಾನ ರಹಿತ) ಶಾಲೆಗೆ **ಪ್ರಥಮ ಮಾನ್ಯತೆ** ನೀಡುವ ಕುರಿತು ಅವಶ್ಯಕ ದಾಖಲೆಗಳೊಂದಿಗೆ ಹಾಗೂ ಪೂರಕ ದಾಖಲಾತಿ/ಹಾಜರಾತಿ ಮಾಹಿತಿಗಳನ್ನು ಈ ಕಛೇರಿಗೆ ಸಲ್ಲಿಸಿದ್ದಾರೆ. ಸದರ ಶಾಲೆಯನ್ನು ಉಲ್ಲೇಖ 03ರನ್ವಯ 1992-93ರ ಸಾಲಿನಲ್ಲಿ ಪ್ರಾರಂಭಿಸಿದ್ದು ಇರುತ್ತದೆ. ಅದರಂತೆ ಪ್ರಾಥಮಿಕ ಶಾಲೆಯನ್ನು ದಿನಾಂಕ 01-06-1992 ರಿಂದ ಶಾಶ್ವತ ಅನುದಾನ ರಹಿತವಾಗಿ ಕನ್ನಡ ಮಾಧ್ಯಮದಲ್ಲಿ 01ನೇ ತರಗತಿಯಿಂದ ಪ್ರಾರಂಭಿಸಿದ್ದಾರೆ. ಅಲ್ಲದೇ ಶಾಲೆಯು ಸತತವಾಗಿ ನಡೆದಿರುವುದರ ಬಗ್ಗೆ ಖಚಿತ ಪಡಿಸಿಕೊಂಡು ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ**:-

ಮೇಲಿನ ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಅದಕ್ಕೆ ಪೂರಕವಾದ ದಾಖಲೆಗಳನ್ನು ಸಂಬಂಧಿಸಿದ ಶಾಲಾ ಸಂಸ್ಥೆಯ ಪದಾಧಿಕಾರಿಗಳು ಬೊಳಚಗುಡ್ಡ ಅವರು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಗಣಿಸಿ, ನವಚೇತನ ಖಾಸಗಿ ಹಿರಿಯ ಪ್ರಾಥಮಿಕ (**ಶಾಶ್ವತ ಅನುದಾನ ರಹಿತ**) ಶಾಲೆಗೆ ಸನ್ 1992-93ರಿಂದ 01ನೇ ತರಗತಿಯ ಕನ್ನಡ ಮಾಧ್ಯಮದ ಒಂದು ವಿಭಾಗಕ್ಕೆ ಈ ಕೆಳಗೆ ನಮೂದಿಸಿದ ಷರತ್ತುಗಳನ್ನು ಪೂರೈಸುವ ನಿಬಂಧನೆಗೆ ಒಳಪಡಿಸಿ ಶಾಶ್ವತ ಅನುದಾನ ರಹಿತ ಕರಾರಿನ ಮೇರೆಗೆ ಪ್ರಥಮ ಮಾನ್ಯತೆಯನ್ನು ನೀಡಲಾಗಿದೆ.

**ಷರತ್ತುಗಳು**:-

1. ಶಾಲೆಯು ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ 50 ದಾಖಲಾತಿ, 40 ಹಾಜರಾತಿ ಇರಬೇಕು. ಅದೇ ಪ್ರಮಾಣದಲ್ಲಿ ತರಬೇತಿ ಆದ ಅರ್ಹ ಶಿಕ್ಷಕರನ್ನು ಮೀಸಲಾತಿ ನಿಯಮಾನುಸಾರ ನೇಮಿಸಿಕೊಳ್ಳಬೇಕು.
2. ಮನ್ನಣೆಯು ತಾತ್ಕಾಲಿಕ ಹಾಗೂ ಶಾಶ್ವತ ಅನುದಾನ ರಹಿತವಾಗಿರುತ್ತದೆ. ಪ್ರಾಥಮಿಕ ಶಾಲಾ ಸಿಬ್ಬಂದಿಗಳ ವೇತನ ಭತ್ಯೆ, ಹಾಗೂ ಶಾಲಾ ನಿರ್ವಹಣಾ ವೆಚ್ಚವನ್ನು ಆಡಳಿತ ಮಂಡಳಿಯವರೇ ಶಾಶ್ವತವಾಗಿ ಭರಿಸತಕ್ಕದ್ದು.
3. ಪ್ರಾಥಮಿಕ ಶಾಲೆಯಲ್ಲಿ ಇಲಾಖಾ ಪೂರ್ವಾನುಮತಿ ಇಲ್ಲದೇ ಇತರೇ ಮಾಧ್ಯಮ ಹಾಗೂ ಹೆಚ್ಚುವರಿ ವಿಭಾಗಗಳನ್ನು ಪ್ರಾರಂಭಿಸಕೂಡದು.
4. ಆಡಳಿತ ಮಂಡಳಿಯವರು ಪ್ರಾಥಮಿಕ ಶಾಲೆಗೆ ಸೂಕ್ತ ತರಬೇತಿ ಹೊಂದಿದ ಬೋಧಕ ಸಿಬ್ಬಂದಿಗಳನ್ನು ಸರಕಾರಿ ಮೀಸಲಾತಿ ನಿಯಮಾವಳಿ (ರೋಸ್ಟರ್ ಪದ್ಧತಿ)ಯನ್ವಯ ನೇಮಕ ಮಾಡಿಕೊಳ್ಳತಕ್ಕದ್ದು.
5. ಆಡಳಿತ ಮಂಡಳಿಯವರು ಪ್ರಾಥಮಿಕ ಶಾಲೆಗೆ ಸಂಬಂಧಿಸಿದಂತೆ ತನ್ನದೇ ಆದ ಸ್ವಂತ ಕಟ್ಟಡ ಹಾಗೂ ಆಟದ ಮೈದಾನ ಇನ್ನಿತರೇ ಮೂಲಭೂತ ಸೌಲಭ್ಯಗಳನ್ನು ಒದಗಿಸತಕ್ಕದ್ದು.
6. ಇಲಾಖೆಯ ಪೂರ್ವಾನುಮತಿ ಇಲ್ಲದೇ ಶಾಲೆಯನ್ನು ಬೇರೆ ಕಡೆಗೆ ಸ್ಥಳಾಂತರಿಸಕೂಡದು.
7. ಆಡಳಿತ ಮಂಡಳಿಯವರು ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಸಾಕಷ್ಟು ಸಂಖ್ಯೆಯಲ್ಲಿ ಪಾಠೋಪಕರಣ, ಪೀಠೋಪಕರಣ ಹಾಗೂ ಇನ್ನಿತರ ಅವಶ್ಯಕ ಬೋಧನಾ ಸಾಮಗ್ರಿಗಳನ್ನು ಒದಗಿಸತಕ್ಕದ್ದು.
8. ಇಲಾಖೆಯ ಅನುಮತಿ ಇಲ್ಲದೇ ಯಾವುದೇ ತರಹದ ಶುಲ್ಕವನ್ನು ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಕೂಡದು.
9. ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಇಲಾಖೆಯ ಅನುಮತಿ ಇಲ್ಲದೇ ಸೇವೆಯಿಂದ ಕಡಿಮೆ ಮಾಡತಕ್ಕದ್ದಲ್ಲ.
10. ಶಾಲೆಯಲ್ಲಿಯ ಪ್ರವೇಶವು ಎಲ್ಲ ಜಾತಿಯ ಹಾಗೂ ಜನಾಂಗದ ಮಕ್ಕಳಿಗೆ ಮುಕ್ತವಾಗಿರಬೇಕು.

----ಪಿನೇ ಪುಟಕ್ಕೆ--->

Scanned by CamScanner

11. ಅನುದಾನ ಸಂಹಿತೆ ( ಪ್ರಾಥಮಿಕ ಶಾಲೆ) ಪ್ರಕಾರ ಪ್ರತಿ ವರ್ಷ ಮಾನ್ಯತೆ ನವೀಕರಿಸಿಕೊಳ್ಳಬೇಕು.
12. ಅನುದಾನ ಸಂಹಿತೆಯಲ್ಲಿಯ ನಿಯಮಗಳನ್ನು ಹಾಗೂ ಇಲಾಖೆಯಿಂದ ಹೊರಡಿಸಲಾದ ಆದೇಶ ಪಾಲಿಸದಿದ್ದರೆ, ಶಾಲೆಗೆ ನೀಡಿದ ಅನುಮತಿ ಮತ್ತು ಮಾನ್ಯತೆಯನ್ನು ರದ್ದುಪಡಿಸುವ ಅಧಿಕಾರವು ಇಲಾಖೆಯು ಪಡೆದಿರುತ್ತದೆ.
13. ಶಾಶ್ವತ ಅನುದಾನ ರಹಿತ ಶಾಲೆಗಳಲ್ಲಿ ನೇಮಕಗೊಂಡ ಪ್ರತಿಯೊಬ್ಬ ಸಿಬ್ಬಂದಿಯವರ ಸೇವಾ ಪುಸ್ತಕಗಳನ್ನು ನಿರ್ವಹಿಸಿ ಇಟ್ಟುಕೊಳ್ಳತಕ್ಕದ್ದು.
14. ಶಿಕ್ಷಣ ಕಾಯ್ದೆ ಜಾರಿಯ ಪ್ರಕಾರ ಕಿರಿಯ ಪ್ರಾಥಮಿಕ ಶಾಲೆಯಾಗಿದ್ದಲ್ಲಿ ಸಂಸ್ಥೆಯ ಚೇರಮನ್ನರು/ಕ್ಷೇತ್ರ ಶಿಕ್ಷಣಾಧಿಕಾರಿಗಳ ಹೆಸರಿನ ಮೇಲೆ 10,000/-ರೂ.ಗಳ ಭದ್ರತಾ ನಿಧಿಯನ್ನು, ಹಿರಿಯ ಪ್ರಾಥಮಿಕ ಶಾಲೆಯಾಗಿದ್ದಲ್ಲಿ ಸಂಸ್ಥೆಯ ಚೇರಮನ್ನರು/ಉಪನಿರ್ದೇಶಕರು ಇವರ ಹೆಸರಿನ ಮೇಲೆ 20,000/-ರೂ.ಗಳ 'ಭದ್ರತಾ ನಿಧಿ'ಯನ್ನು ಹೊಂದಿರಬೇಕು.
15. ಸಂಸ್ಥೆಯ ಹೆಸರಿನಲ್ಲಿ ೦೫ (ಐದು) ಲಕ್ಷ ರೂ.ಗಳು ಬ್ಯಾಂಕಿನಲ್ಲಿ ಅಥವಾ ಸ್ಥಿರ ಆಸ್ತಿ ಇರುವ ಬಗ್ಗೆ ವ್ಯಾಲಿವ್ ವೇಟರ್ನಿಂಗ್ ದಾಖಲೆಯನ್ನು ಈ ಪ್ರಥಮ ಮನ್ನಣೆಯನ್ನು ಹೊರಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಕಛೇರಿಗೆ ಸಲ್ಲಿಸುವುದು.
16. ಖಾಸಗಿ ಶಾಲೆಗಳಲ್ಲಿ ಸರಕಾರದ ಸುತ್ತೋಲೆಯನ್ವಯ ಮಕ್ಕಳ ಸುರಕ್ಷತೆಯ ಬಗ್ಗೆ ಕಾಪಾಡಿಕೊಳ್ಳಲು ಅಗತ್ಯ ಕ್ರಮಗಳನ್ನು ಅನುಸರಿಸಬೇಕು.

ಆಡಳಿತ ಮಂಡಳಿಯವರು ಹಾಗೂ ಶಾಲಾ ಸಿಬ್ಬಂದಿಯವರು ಮೇಲಿನ ಎಲ್ಲಾ ಷರತ್ತುಗಳನ್ನು ಪಾಲಿಸಿದಲ್ಲಿ ಹಾಗೂ ಅನುದಾನ ಸಂಹಿತೆಯ ನಿಯಮಾವಳಿಗಳ ಅಧ್ಯಾಯ ನಂ.03ರ ನಿಯಮ 9ರ ಪ್ರಕಾರ ಎಲ್ಲಾ ಮೂಲಬೂತ ಸೌಲಭ್ಯಗಳನ್ನು ಒದಗಿಸಿದಲ್ಲಿ, ಅದನ್ನು ಖಚಿತ ಪಡಿಸಿಕೊಂಡ ನಂತರವೇ ಮುಂದಿನ ಮಾನ್ಯತೆಯನ್ನು ನವೀಕರಿಸಲಾಗುವುದೆಂಬ ಅಂಶವನ್ನು ಇಲ್ಲಿ ತಿಳಿಸುತ್ತಾ, ಸದರ ಶಾಲೆಗೆ ಪ್ರಥಮ ಮನ್ನಣೆಯನ್ನು ಶಾಶ್ವತ ಅನುದಾನ ರಹಿತವಾಗಿ ಕನ್ನಡ ಮಾಧ್ಯಮದಲ್ಲಿ 1992-93ರ ಸಾಲಿನಿಂದ ಮಂಜೂರಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ ಬಾದಾಮಿ.
8/04/08

ಗೆ,

1. ಚೇರಮನ್ನರು, ನವಚೇತನ ಎಜ್ಯುಕೇಶನ್ ಸೊಸೈಟಿ (ರಿ) ಚೊಳಚಗುಡ್ಡ, ತಾ:ಬಾದಾಮಿ.
2. ಮುಖ್ಯಗುರುಗಳು, ನವಚೇತನ ಕನ್ನಡ ಹಿ.ಪ್ರಾ.ಶಾಲೆ ಚೊಳಚಗುಡ್ಡ, ತಾ:ಬಾದಾಮಿ.

Scanned by CamScanner